**ಇಂದು ದಿನಾಂಕ 20-03-2024 ರಂದು ಪಿಡಬ್ಲ್ಯೂ-1 ರವರನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ನನಗೆ ಸುಮಾರು 10 ವರ್ಷಗಳಿಂದ ಪರಿಚಯವಿರುತ್ತಾರೆ. ನಆರೋಪಿ ಮತ್ತು ನಾನು ಅಕ್ಕ ಪಕ್ಕದ ಗ್ರಾಮದವರಾಗಿದ್ದರಿಂದ ಪರಿಚಯವಿರುತ್ತಾರೆ. ನಾನು ಆರೋಪಿಗೆ ಬಡ್ಡಿಗೆ ಹಣ ನೀಡಿರುವುದಿಲ್ಲ.

2. ದಿ.06-09-2018 ರಂದು ಆರೋಪಿ ನಮ್ಮ ಮನೆಗೆ ಬಂದು ಸಾಲ ಕೊಡುವಂತೆ ಕೇಳಿದರು. ನಾನು ಆ ದಿನವೇ ಆರೋಪಿಗೆ ಸಾಲ ನೀಡಿರುತ್ತೇನೆ. ಆ ಸಮಯದಲ್ಲಿ ಮನೆಯಲ್ಲಿ ಯಾರು ಇರಲಿಲ್ಲ. ಆರೋಪಿ ಸುಮಾರು ಮದ್ಯಾಹ್ನ 12.30 ಗಂಟೆಗೆ ಮನೆಗೆ ಬಂದು ಹಣ ಪಡೆದಿರುತ್ತಾರೆ. ಆರೋಪಿ ಒಟ್ಟು ಆರು ಲಕ್ಷ ಸಾಲ ಬೇಕೇಂದು ಕೇಳಿದ್ದು, ನನ್ನ ಬಳಿ ಆರು ಲಕ್ಷ ಹಣ ಇಲ್ಲದೇ ಇದ್ದುದ್ದರಿಂದ ನಾನು ಆರೋಪಿಗೆ ರೂ.5,60,000 /- ಸಾಲವಾಗಿ ನೀಡಿರುತ್ತೇನೆ.

3. ನನ್ನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆರೋಪಿ ನನ್ನಿಂದ ಆರು ಲಕ್ಷ ಸಾಲ ಕೇಳಿದ್ದು, ನಾನು ರೂ.5,60,000/- ಸಾಲ ನೀಡಿರುತ್ತೇನೆ ಎಂಬುದವರ ಬಗ್ಗೆ ಹೇಳಿರುವುದಿಲ್ಲ. ನಾನು ರೂ.5,60,000/- ಗಳನ್ನು ಆರೋಪಿಗೆ ನಗದು ರೂಪದಲ್ಲಿ ನೀಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ವ್ಯವಸಾಯದಿಂದ ಹಾಗೂ ಇತರೆ ಮೂಲದಿಂದ ಒಟ್ಟು 5 ರಿಂದ 6 ಲಕ್ಷ ಆದಾಯ ಬರುತ್ತದೆ.

4. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಮಗ ವಾಸವಾಗಿದ್ದೇವೆ. ನಾನು ಆರೋಪಿಗೆ ಸಾಲ ನೀಡಿದ ಸಮಯದಲ್ಲಿ ನನ್ನ ಮಗ ಎಂ.ಬಿ.ಎ ವಿದ್ಯಾಭ್ಯಾಸ ಮಾಡುತ್ತಿದ್ದನು. ನನ್ನ ಮಗನ ವಿದ್ಯಾಭ್ಯಾಸದ ಖರ್ಚಿಗೆ ವರ್ಷಕ್ಕೆ ರೂ. 1,00,000/- ಖರ್ಚಾಗುತ್ತಿತ್ತು. ನಮ್ಮ ಮನೆಯ ಖರ್ಚಿಗೆ ತಿಂಗಳಿಗೆ ರೂ. 5,000/- ಹಣ ಸಾಕಗುತ್ತದೆ. ನಾನು ಆರೋಪಿಗೆ ನೀಡಿದ ರೂ.5,60,000/- ಹಣ

ಮನೆಯಲ್ಲಿಯೇ ಇತ್ತು. ನಾನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಡವೆಗಳನ್ನು ಅಡಮಾನ ಮಾಡಿ ಬಂದಿದ್ದ ರೂ. 4,60,000/- ಹಾಗೂ ಉಳಿದ ಮೊತ್ತ ಮನೆಯಲ್ಲಿಯೇ ಇತ್ತು. ನಾನು ಆರೋಪಿಗೆ ಹಣ ನೀಡುವ ಎರಡು-ಮೂರು ದಿನಗಳ ಹಿಂದೆ ವಡವೆಗಳನ್ನು ಬ್ಯಾಂಕಿಗೆ ಅಡಮಾನ ಮಾಡಿದ್ದೇನು. ನಾನು ಈ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿರುವುದಿಲ್ಲ.

5. ನಾನು ಬ್ಯಾಂಕ್ ನಲ್ಲಿ ವಡವೆಗಳನ್ನು ಅಡಮಾನ ಇಟ್ಟು ರೂ. 4,60,000/- ಪಡೆದಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ಪರವಾನಗೆ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**